ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೋರಿ ರಿಪೇರಿಗೆ ಹಾಕಿರತಕ್ಕಂಥ, ಸಿ.ಡಿ ರಿಪೇರಿಗೆ ಹಾಕಿರತಕ್ಕಂಥ ಹಣವನ್ನು ರಸ್ತೆ ರಿಪೇರಿಗೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಮೋರಿಗೆ ಮತ್ತು ರಸ್ತೆಗೆ ವ್ಯತ್ಯಾಸ ಗೊತ್ತಿಲ್ಲವೆಂದು ತಿಳಿದುಕೊಳ್ಳಬೇಕಾಗುತ್ತದೆ. ನಾನು ಹೇಳುವುದೇನೆಂದರೆ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಇದು ಬಹಳ ಪ್ರಮುಖವಾದಂತಹ ರಸ್ತೆ. ನೀವು ಏನು ಹಣ ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದೀರಿ, ಎಲ್ಲಾ ಹಣ ಕೂಡ ಮಳೆಗಾಲದಲ್ಲಿ ಆಗಿರತಕ್ಕಂಥ ಮೋರಿಗಳು ಕಡಿದು ಹೋಗಿರುವುದಕ್ಕೆ ರಿಪೇರಿಗೆ ಹಾಕಿದ್ದಾರೆ. ಮರು ಡಾಂಬರು ಹಾಕಿಲ್ಲ, ಅಗಲ ಮಾಡಿಲ್ಲ. ಅಗಲ ಮಾಡಬೇಕು ಮತ್ತು ಮರು ಡಾಂಬರು ಹಾಕಬೇಕು. ಎಲ್ಲಾ ರಿಪೇರಿ ಮಾಡಬೇಕು. ಅದಕ್ಕೆ ಉತ್ತರ ಹೇಳಬೇಕು. ಯಾವಾಗ ಮಾಡುತ್ತೀರಿ? ಎಲ್ಲೆಲ್ಲಿ ಮಾಡುತ್ತೀರಿ? ನೀವು ಹಾಕಿದ್ದೇವೆಂದು ಹೇಳುತ್ತಿರುವುದು ಮೋರಿ ರಿಪೇರಿಗೆ ಹಾಕಿರತಕ್ಕಂಥ ದುಡ್ಡು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ರಸ್ತೆ ಸಾರಿಗೆ ಯೋಗ್ಯವಾಗಿಲ್ಲವೆಂದು ಹೇಳುತ್ತಿದ್ದಾರೆ. ಅವರು ಖಾಸಗಿಯಾಗಿ ನನ್ನ ಹತ್ತಿರ ಬಂದು ಮಾತನಾಡುವಾಗ ಒಂದು ಗಂಟೆಗೆ ಬರಬೇಕಾಗಿರುವಂತಹ ರಸ್ತೆಯಲ್ಲಿ ಎರಡು ಗಂಟೆ ಹಿಡಿಯುತ್ತದೆ ಎಂದು ಹೇಳಿದ್ದಾರೆ. ಈ ರಸ್ತೆ ತೀವ್ರವಾಗಿ ಬರಬೇಕಾದರೆ ರಸ್ತೆ ಸುಧಾರಣೆಯಾಗಬೇಕಾದಂತಹ ಕೆಲಸದಲ್ಲಿ ಹೆಚ್ಚಿನ ಹಣ ಬಿಡುಗಡೆ ಆಗಬೇಕಾಗಿದೆ. ಹಣಕಾಸಿನ ಲಭ್ಯತೆ ಆಧಾರದ ಮೇಲೆ ತೀವ್ರವಾಗಿ ಮಾಡಿಸುತ್ತೇನೆನ್ನುವುದರ ಜೊತೆಗೆ ಸ್ಥಳಕ್ಕೆ ಹೋಗಿ ಬರುತ್ತೇನೆ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಖಾಸಗಿಯಾಗಿ ಹೇಳಿರತಕ್ಕಂಥ ಒಂದು ವಿಷಯ ಹೇಳಿದ್ದಾರೆ. ನಾನು ಖಾಸಗಿಯಾಗಿ ಹೇಳಿರುವುದು ನಿಜ. ಒಂದು ಗಂಟೆ ಪ್ರಯಾಣದ ರಸ್ತೆಗೆ ಎರಡು ಗಂಟೆಯಲ್ಲಿ ಹೋಗುವುದಾದರೆ ಅದು ಯೋಗ್ಯ ರಸ್ತೆಯೇ?

ಉಪಾಧ್ಯಕ್ಷರು : ಅದನ್ನು ಸರಿ ಮಾಡಿಕೊಡುತ್ತೇವೆಂದು ಹೇಳಿದರು. ಕುಳಿತುಕೊಳ್ಳಿ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಸರಿ ಮಾಡಿಕೊಡುತ್ತೇವೆಂದು ಹೇಳಲಿ.

ಉಪಾಧ್ಯಕ್ಷರು : ಹೇಳಿದರು, ನೀವು ಕೇಳಲಿಲ್ಲ.

ಚಿಂಚೋಳಿಯಲ್ಲಿ ಕ್ರೀಡಾಂಗಣದ ನಿರ್ಮಾಣ

196 - ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂಚೋಳಿಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಕ್ರೀಡಾಂಗಣಕ್ಕೆ ಬೇಕಾಗುವ ಸ್ಥಳ ದೊರಕಿದಯೇ? ದೊರಕಿದ್ದರೆ ಸರ್ವೇ ನಂಬರ್ ಎಷ್ಟು?

ಇ) ಈ ಜಮೀನು ದಾನ ಮಾಡಿದವರ ಹೆಸರೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು, ಸರ್ಕಾರಿ ಆದೇಶ ಸಂಖ್ಯೆ: ವಾಪ್ರಯು:222: ಯುಸೇಕ್ರೀ:97, ದಿನಾಂಕ:22.8.97 ರನ್ವಯ ಚಿಂಚೋಳಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸಲು ರೂ. 35.20 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಹೌದು, ದೊರಕಿದೆ. ಈ ಉದ್ದೇಶಕ್ಕಾಗಿ ಚಿಂಚೋಳಿ ಪಟ್ಟಣದ ಸರ್ವೆ ನಂ.206ನ್ನು ಶ್ರೀಮತಿ ಜ್ಞಾನೇಶ್ವರಿ, ಗಂಡ ವೈಜನಾಥ್ ಪಾಟೀಲ್ ಮತ್ತು ಇತರರಿಂದ ದಾನರೂಪದಲ್ಲಿ ನೀಡಲಾಗಿದೆ.

ಇ) 1. ಶ್ರೀಮತಿ ಜ್ಞಾನೇಶ್ವರಿ, ಗಂಡ: ವೈಜನಾಥ್ ಪಾಟೀಲ್

2. ಶ್ರೀಮತಿ ಲಕ್ಷ್ಮೀಬಾಯಿ : ಗಂಡ: ಕಾಶಪ್ಪ

3. ಶ್ರೀಮತಿ ಚೋಳಮ್ಮ, ಗಂಡ: ವೀರಶೆಟ್ಟಿ ಪಾಟೀಲ್

4. ಶ್ರೀ ಡಾ|| ಶಾಂತವೀರ ಬಸವಣ್ಣಪ್ಪ ಸುಂಕದ

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. 1991ರಲ್ಲಿ ಅಂದಿನ ಡೆಪ್ಯೂಟಿ ಕಮೀಷನರ್ ಚಿಂಚೋಳಿಯಲ್ಲಿ ಒಂದು ಕ್ರೀಡಾಂಗಣ ಬೇಕು ಅಲ್ಲಿ ಯಾವುದು ಜಮೀನು ಇಲ್ಲ, ನಿಮ್ಮದೇ ಜಮೀನು ಕೊಡಬೇಕೆಂದು ಹೇಳಿದಾಗ, ಅಲ್ಲಿ ಒಂದು ಜಾಯಿಂಟ್ ಪ್ರಾರ್ಪಟಿ ಹೆಣ್ಣುಮಕ್ಕಳದ್ದು ಇತ್ತು. ನಾಲ್ಕು ಜನ ಸೇರಿ 8 ಎಕರೆ ಜಮೀನು ಡೊನೇಟ್ ಮಾಡಿದರು. ಇವತ್ತು ಅದು 5 ಲಕ್ಷ ರೂಪಾಯಿ ಕಿಮ್ಮತ್ತು ಇದೆ. ಅಲ್ಲಿ1991ರಿಂದ ಇವತ್ತಿನವರೆಗೂ ಏನು ಮಾಡಿಲ್ಲ. ಅಲ್ಲಿ ಬಂಡೆಪ್ಪ ಎಂದು ಒಬ್ಬ ಅಧಿಕಾರಿ ಮೊದಲಿನಿಂದಲೂ ಅಲ್ಲಿ ಇದ್ದಾರೆ. ಅವರನ್ನು ಕೇಳಿದರೆ ಇದೇ ಉತ್ತರ ಹೇಳುತ್ತಾರೆ. ನಾನು ಇಲ್ಲಿ ಪ್ರಶ್ನೆ ಕೇಳಿರುವುದಕ್ಕೆ ಏನೋ ಉತ್ತರ ಕೊಟ್ಟಿದ್ದಾರೆ. ಆದರೆ ಡೆಪ್ಯೂಟಿ ಕಮೀಷನರ್ ನೀವು ಜಮೀನನ್ನು ಡೊನೇಟ್ ಮಾಡಿ ಕ್ರೀಡಾಂಗಣ ಒಂದು ವರ್ಷದಲ್ಲಿ ಮಾಡುತ್ತೇವೆಂದು ಹೇಳಿದ್ದರು. ಈಗಾಗಲೇ 7-8 ವರ್ಷವಾಯಿತು. ಏನೂ ಆಗಿಲ್ಲ. ಯಾರು ಡೊನೇಟ್ ಮಾಡುತ್ತಾರೆ, ಅವರು ಯಾರ ಹೆಸರು ಹೇಳುತ್ತಾರೆ ಅದನ್ನು ಇಡುತ್ತೇವೆಂದು ಕೂಡ ಹೇಳಿದ್ದರು. ಡೊನೇಟ್ ಮಾಡಿರುವಂತಹ ಆ ನಾಲ್ಕು ಜನರ ಗ್ರಾಂಡ್ ಮದರ್ ಹೆಸರಿಡಬೇಕೆಂದು ತಿಳಿಸಿದ್ದರೂ, ಇಲ್ಲಿಯವರೆಗೆ ಏನೂ ಆಗಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವೈಜನಾಥ್ ಪಾಟೀಲ್‌ರವರ ಕುಟುಂಬದವರು ಕ್ರೀಡಾಂಗಣಕ್ಕೆ ಜಮೀನು ಕೊಟ್ಟಿರತಕ್ಕಂಥಾದ್ದು ಶ್ಲಾಘನೀಯ. ಸರ್ಕಾರ ಅದರ ಬಗ್ಗೆ ಈಗಾಗಲೇ ಕ್ರಮವನ್ನು ಕೈಗೊಂಡಿದೆ. ಈಗಾಗಲೇ ಆ ಸ್ಥಳದಲ್ಲಿ 35 ಲಕ್ಷ 20 ಸಾವಿರ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಪಂಚಾಯತ್ ವಲಯದಿಂದ ಕ್ರೀಡಾಂಗಣ ನಿರ್ಮಾಣ ಮಾಡಲು ಆಡಳಿತಾತ್ಮಕ ಮಂಜೂರಾತಿ ಆಗಿದೆ. ಹಾಗೂ ಭೂಸೇನಾ ನಿಗಮದವರಿಗೆ 5 ಲಕ್ಷ

ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಹೆಸರು ಇಡುವ ಬಗ್ಗೆ ಹೇಳುವುದಾದರೆ, ಡೊನೇಟ್ ಮಾಡಿರುವವರ ಅಜ್ಜಿಯ ಹೆಸರನ್ನು ಇಡಬೇಕೆಂದು ಹೇಳಿದ್ದಾರೆ. ಅದಕ್ಕೆ ಅಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಅಧಿಕಾರಿಗಳಿಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದರೆ ತಕ್ಷಣ ಅದನ್ನು ಕಾರ್ಯರೂಪಕ್ಕೆ ತರುತ್ತೇವೆ.

ವಿಮಾ ಕಛೇರಿಯ ಪ್ರಾರಂಭ

197 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ವಿಮಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರದವರಲ್ಲಿದೆಯೆ?

ಆ) ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರದವರು ಪರಿಶೀಲಿಸುವರೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಸರ್ಕಾರಿ ವಿಮಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರದಲ್ಲಿದೆಯೇ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದಾರೆ. ಆದರೆ ಶಿವಮೊಗ್ಗದಲ್ಲಿ ಕಛೇರಿಯ ಉದ್ಘಾಟನಾ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಇದನ್ನು ಮಾಡುತ್ತೇವೆಂದು ಹೇಳಿದ್ದರು. ಇದನ್ನು ಪುನರ್ ರಚನೆ ಮಾಡುತ್ತೇವೆ, ಇದರ ಬಗ್ಗೆ ಏನೇನು ಪ್ರಯತ್ನ ಬೇಕು ಮಾಡಿಸುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಏನೇನು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಎರಡನೆಯದು ಶಿವಮೊಗ್ಗ ನಗರದಲ್ಲಿ ವಿಭಾಗೀಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರದವರು ಪರಿಶೀಲಿಸುವರೇ? ಎಂದು ಕೇಳಿದ್ದೆ. ಅದಕ್ಕೆ ಉತ್ತರ ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇನ್ನು ಒಂದು ವರ್ಷದಲ್ಲಿ ಈ ಎಲ್ಲಾ ಕಾರ್ಯಗಳನ್ನು ಮುಗಿಸಿ ಕೊಡುತ್ತೇವೆಂದು ಹೇಳಿದ್ದರು. ನಾನು ತಮ್ಮ ಮುಖಾಂತರ ನೇರವಾಗಿ ಸರ್ಕಾರವನ್ನು ಕೇಳಬಯಸುತ್ತೇನೆ. ಈ ವಿಮಾ ಇಲಾಖೆಯನ್ನು ಪುನರ್ ರಚಿಸುವ ಬಗ್ಗೆ ಏನಾದರೂ ಪ್ಲಾನ್ ಇದೆಯೋ? ಎರಡನೆಯದಾಗಿ ಶಿವಮೊಗ್ಗ ನಗರದಲ್ಲಿ ವಿಭಾಗಿಯ ವಿಮಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ